(ಅನುಬಂಧ–6)

1.ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2007 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಜಿ.ಟಿ.ದೇವೇಗೌಡ (ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ, 2007ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ ;

"2007 ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಜಿ.ಟಿ.ದೇವೇಗೌಡ (ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ, 2007 ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ನಮಗೆ ಬಿಲ್ ಕಾಪಿಯನ್ನೇ ಕೊಟ್ಟಿಲ್ಲ. ಹೀಗಿರುವಾಗ ಅದರ ಮೇಲೆ ಚರ್ಚೆ ಹೇಗೆ ಮಾಡುವುದು?

ಶ್ರೀ ಜೆ.ಸಿ.ಮಾಧುಸ್ವಾಮಿ:– ಬಿಲ್ ಕಾಪಿ ಸರ್ಕ್ಯುಲೇಟ್ ಮಾಡಿ.

ಅಧ್ಯಕ್ಷರು:– ಬಿಲ್ ಕಾಪಿ ಸರ್ಕ್ಯುಲೇಟ್ ಮಾಡಿದ್ದೀರೇನಪ್ಪಾ?

ಶ್ರೀ ಜಿ.ಟಿ.ದೇವೇಗೌಡ:– ಅದರಲ್ಲೇನೂ ಇಲ್ಲಾ ಮಾನ್ಯ ಅಧ್ಯಕ್ಷರೆ, ಸರ್ಕಾರದ ಅಧೀನ ಅಧಿಕಾರಿಗಳಿಗೆ ಅಧಿಕಾರ ಕೊಡುವುದಷ್ಟೆ ಇರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಅದೇನೆ ಇರಲಿ ಮಾನ್ಯ ಅಧ್ಯಕ್ಷರೆ, ಬಿಲ್ ಕಾಪಿಯನ್ನು ಸರ್ಕ್ಯುಲೇಟ್ ಮಾಡಬೇಡವೆ?

ಅಧ್ಯಕ್ಷರು:– ಅಜೆಂಡಾದಲ್ಲಿ ಹೋಗಿರುತ್ತದೆ. ಈಗ ಇಲ್ಲಿ ಸರ್ಕ್ಯುಲೇಟ್ ಮಾಡಲು ಇರಬೇಕು.

ಶ್ರೀ ವಾಟಾಳ್ ನಾಗರಾಜ್:– ಬಿಲ್ ಕಾಪಿ ನಮಗೆ ಬಂದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಬಿಲ್ ಕಾಪಿ ನಮಗೆ ಬಂದಿಲ್ಲ. ಆದ ಕಾರಣ ನಾಳೆ ಇದನ್ನು ತೆಗೆದುಕೊಳ್ಳಿ.

ಶ್ರೀ ಜಿ.ಟಿ.ದೇವೇಗೌಡ:– ಅದರಲ್ಲಿ ಏನೂ ಇಲ್ಲ. ಸರ್ಕಾರಕ್ಕೆ ಅಧಿಕಾರ ಇದೆ, ಅದನ್ನು ಸರ್ಕಾರದ ಅಧೀನ ಅಧಿಕಾರಿಗಳಿಗೆ ಕೊಡುವುದು ಅಷ್ಟೆ ಇರುವುದು.

ಅಧ್ಯಕ್ಷರು:– Copy agenda ದಲ್ಲಿ ಹೋಗಿರುತ್ತದೆ. ಈಗ ಕೆಲವರಿಗೆ ಹೋಗಿದ್ದರೆ ಮಾತನಾಡಿ. Copy ಇಲ್ಲವೇ?

ಶ್ರೀ ಜೆ.ಸಿ.ಮಾಧುಸ್ವಾಮಿ:– ಇಲ್ಲ ಬಂದಿಲ್ಲ. Copies of the Bill ಇಲ್ಲವೆಂದರೆ...

ಶ್ರೀ ಜಿ.ಟಿ.ದೇವೇಗೌಡ:– Joint registrar, Deputy register, Assistant Registrar ಗೆ Appeal authority ಕೊಡುವಂತಹ ವಿಚಾರ ಅಷ್ಟೆ ಇರುವುದು. ಅದು ಈಗ ಸರ್ಕಾರಕ್ಕೆ ಅಧಿಕಾರ ಇದೆ, ಅದನ್ನು ಈಗ ನಾವು ಅಧೀನ ಅಧಿಕಾರಿಗಳಿಗೆ ಕೊಡಬೇಕು.

ಅಧ್ಯಕ್ಷರು:– ಅದು copy ಇಲ್ಲವೇ? ಆಯಿತು, ಈಗ ಅದನ್ನು copy ಬಂದ ಮೇಲೆ ತೆಗೆದುಕೊಳ್ಳೋಣ. ಈಗ ಹೊರಟ್ಟಿಯವರಿಗೆ ಸಂಬಂಧಪಟ್ಟ Bill ಇದೆ ಅದನ್ನು ತೆಗೆದುಕೊಳ್ಳೋಣ.